# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಾರ್ಯದರ್ಶಿ, ವಾರ್ಡ್ ಸಮಿತಿ/ಸಹಾಯಕ ಅಭಿಯಂತರರ ಕಛೇರಿ, ದಯಾನಂದನಗರ ವಾರ್ಡ್-97**
**1ನೇ ಮುಖ್ಯ ರಸ್ತೆ. ಶ್ರೀರಾಂಪುರ ಪೋಲಿಸ್ ಠಾಣೆ ಹಿಂಭಾಗ, ದಯಾನಂದನಗರ**

ದಿ:19.01.21

*ಸಂ: ವಾ-97/ವಾ.ಸ/ಸಭಾನಡವಳಿ-08/20-21*

## ಸಭೆಯ ನಡವಳಿಗಳು

ದಿನಾಂಕ: 19.01.21 ಮಂಗಳವಾರ ಪೂರ್ವಾಹ್ನ 11.00 ಘಂಟೆಗೆ ವಾರ್ಡ್-97 ದಯಾನಂದನಗರದ ವಾರ್ಡ್ ಮಟ್ಟದ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಶ್ರೀಮತಿ ಅಮೃತ ಸಾಯಿ ಸಮಿತಿಯ ಕಾರ್ಯದರ್ಶಿಗಳು ಹಾಗೂ ಸಂಚಾಲಕರು ವಾರ್ಡ್-97 ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರಿದರು. ನಂತರ ಸಾರ್ವಜನಿಕರ ಕುಂದು ಕೊರತೆಗಳು ಹಾಗೂ ವಾರ್ಡ್ ಅಭಿವೃದ್ಧಿಗೆ ಸಂಬಂದಿಸಿದಂತೆ ಹಾಗೂ ಕೋವಿಡ್-19 ವೈರಸ್‌ನ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು, ಮೂಲಭೂತ ಸೌಕರ್ಯಗಳನ್ನು ಒದಗಿಸಲು ಹಾಗೂ ಸಾರ್ವಜನಿಕರ ಹಿತರಕ್ಷಣೆಗಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಬಗ್ಗೆ ಚರ್ಚಿಸಲು ಸಭೆಗೆ ಆಗಮಿಸಿರುವ ಎಲ್ಲಾ ಅದೀಕಾರಿಗಳಿಗೆ ಸಹಾಯಕ ಅಭಿಯಂತರರು ಸಭೆಗೆ ಸ್ವಾಗತ ಕೋರುತ್ತಾ,ಸಭೆಯನ್ನು ಮುನ್ನಡೆಸಲಾಯಿತು.

**ಸಭೆಗೆ ಹಾಜರಿದ್ದವರು:**

1. ಶ್ರೀಮತಿ.ಅಮೃತ ಸಾಯಿ, ನೋಡಲ್ ಅಧಿಕಾರಿಗಳು ಹಾಗೂ ವಾರ್ಡ ಸಮಿತಿ ಅಧ್ಯಕ್ಷರು.
2. ಶ್ರೀಮತಿ.ಅಮೃತ ಸಾಯಿ, ಕಾರ್ಯದರ್ಶಿ ಹಾಗೂ ಸಂಚಾಲಕರು.
3. ಶ್ರೀ.ಕಿರಣ್ ಕುಮಾರ್.ಹೆಚ್.ಸಿ,ಕಂದಾಯ ಪರೀವೀಕ್ಷಕರು.
4. ಶ್ರೀ.ಎಂ.ಹೆಚ್.ಹೆಗಡೆ, ಪೋಲೀಸ್ ಕಾನ್ಸ್ಟೇಬಲ್(ಟ್ರಾಫಿಕ್ ಪೋಲೀಸ್ ಠಾಣೆ-ಮಲ್ಲೇಶ್ವರಂ)
5. ಶ್ರೀ.ಮಂಜುನಾಥ್.ಬಿ, ಕಂದಾಯ ಪರೀವೀಕ್ಷಕರು.
6. ಶ್ರೀ.ಎನ್.ವೆಂಕಟೇಶ್. ಕಿರಿಯ ಆರೋಗ್ಯ ಪರಿವೀಕ್ಷಕರು(ಘನತ್ಯಾಜ್ಯ ನಿರ್ವಹಣೆ-ಬಿಬಿಎಂಪಿ)
7. ಶ್ರೀ.ನಾಗರಾಜ್.ಎಸ್ ತೋಟಗಾರಿಕೆ ಇಲಾಖೆ

## *ಸಭೆಯಲ್ಲಿ ಚರ್ಚಿಸಲಾದ ವಿಷಯಗಳು*

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರು ಸಮುಖದಲ್ಲಿ ವಾರ್ಡ್ ಸಂ:97 ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯನ್ನು ಉದ್ದೇಶಸಿ ಮಾತನಾಡುತ್ತಾ ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರುತ್ತಾ ವಾರ್ಡ್ ವ್ಯಾಪ್ತಿಯ ಜಲಮಂಡಳಿ, ಬೆಸ್ಕಂ ಘನತ್ಯಾಜ್ಯ ವಿಲೇವಾರಿ, ಆರೋಗ್ಯ ಇಲಾಖೆ, ಕಂದಾಯ, ಕಾಮಗಾರಿ ಇಲಾಖೆಗಳಿಗೆ ಸಂಬಂದಿಸಿದಂತೆ ಪ್ರಸ್ತುತ ಇರುವ ಸಮಸ್ಯೆಗಳು ಹಾಗೂ ಪರಿಹಾರೋಪಾಯಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

1. **ತೋಟಗಾರಿಕೆ ಇಲಾಖೆ:**

ಸಾರ್ವಜನಿಕರ ದೂರು ನೀಡಿದ್ದ ಹಿನ್ನಲೆಯಲ್ಲಿ ದಯಾನಂದನಗರ ಉದ್ಯಾನವನ ಹಾಗೂ ಭಾಷ್ಯಂನಗರ ಉದ್ಯಾನವನವನ್ನು ನಿದಧಿಪಡಿಸಿರುವ ಸಮಯದಲ್ಲಿ ಸಾರ್ವಜನಿಕರಿಗೆ

Scanned with CamScanner

ಉಪಯೋಗವಾಗಲು ತೆರೆಯಲು ತೋಟಗಾರಿಕೆ ಇಲಾಖೆಯವರಿಗೆ ಸೂಚಿಸಲಾಯಿತು. ಹಾಗೂ ದಯಾನಂದನಗರ ಉದ್ಯಾನವನವನ್ನು ಸಚ್ಚವಾಗಿ ಇಡಲು ಸೂಚಿಸಲಾಯಿತು.

2. **ಟ್ರಾಫಿಕ್ ಇಲಾಖೆ:**

ದಯಾನಂದನಗರ ಉದ್ಯಾನವನದ ಸುತ್ತಲು ನಿಲ್ಲಿಸಿರುವ ವಾಹನಗಳನ್ನು ತೆರವುಗೋಳಿಸಲು ಟ್ರಾಫಿಕ್ ಪೋಲೀಸ್ ರವರಿಗೆ ಸೂಚಿಸಲಾಯಿತು. ಅಂಬೇಡ್ಕರ್ ಡೇ ಕೇರ್ ಸೆಂಟರ್ ಎದುರು ನಿಂತಿದ್ದ ಅನಧಿಕೃತ ವಾಹನಗಳನ್ನು ತೆರವು ಮಾಡಲಾಗಿರುತ್ತದೆ ಎಂದು ಶ್ರೀ.ಎಂ.ಹೆಚ್.ಹೆಗಡೆ, ಪೋಲೀಸ್ ಕಾನ್ಸ್‌ಟೇಬಲ್ ರವರು ತಿಳಿಸಿದರು.

3. **ಬೃಹತ್ ನೀರುಗಾಲುವೆ ಇಲಾಖೆ:**

ಆಶಿರ್ವಾದ ಕ್ಲಿನಿಕ್, ಬಂಡಿ ರೆಡ್ಡಿ ವೃತ್ತ ಇಲ್ಲಿ ಹಾದು ಹೋಗುವ ಬೃಹತ್ ನೀರುಗಾಲುವೆ ಹೂಳನ್ನು ತೆಗೆದು,ಆ ಜಾಗದಿಂದ ತೆರವುಗೊಳಿಸಿರುವುದಿಲ್ಲ ಎಂದು ದೂರು ನೀಡಿದ್ದು, ಕಾಮಗಾರಿ ಇಲಾಖೆ ಯವರಿಗೆ ಬೃಹತ್ ನೀರುಗಾಲುವೆ ಯವರಿಗೆ ಹೂಳನ್ನು ತೆಗೆಸಲು ಪತ್ರ ಬರೆಯಲು ಸೂಚಿಸಲಾಗಿರುತ್ತದೆ.

4. **ಘನತ್ಯಾಜ್ಯ ಇಲಾಖೆ:**

ಅಂಬೇಡ್ಕರ್ ಡೇ ಕೇರ್ ಸೆಂಟರ್ ಎದುರು ಇರುವ ಘನತ್ಯಾಜ್ಯ ಲಾರಿ ನಿಲ್ಲಿಸಲು ಸಾರ್ವಜನಿಕರಿಂದ ದೂರು ಬರುತ್ತಿರುವುದರಿಂದ ಲಾರಿ ನಿಲ್ಲಿಸಲು ಬೇರೆ ಸ್ಥಳ ನೀಡಲು ಕಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು. ಸದರಿ ವಿಷಯದ ಬಗ್ಗೆ ಸ್ಥಳ ಪರಿಶೀಲಿಸಿ, ಚರ್ಚಿಸಿ ಬೇರೆ ಸ್ಥಳದ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಯಿತು.

5. **ಕಾಮಗಾರಿ ಇಲಾಖೆ:**

ಮುದ್ದಪ್ಪ ಗಾರ್ಡನ್‌ನಲ್ಲಿರುವ ಖಾಲಿ ನಿವೇಶನವನ್ನು ಸ್ವಚ್ಛ ಮಾಡಿಸಲು ಸಾರ್ವಜನಿಕರು ದೂರು ನೀಡಿರುತ್ತಾರೆ. ಸದರಿ ದೂರಿಗೆ ಸಂಬಂದಿಸಿದಂತೆ ಸಿಲ್ಪ ಆಂಡ್ ಟ್ರಾಕ್ಟರ್ ಕಾಮಗಾರಿ ಶುರುವಾದ ನಂತರ ಸ್ವಚ್ಛ ಮಾಡಿಸುವುದಾಗಿ ತಿಳಿಸಲಾಯಿತು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೋಳ್ಳಲು ಸೂಚಿಸಿ ಸಮಿತಿಯ ಅಧ್ಯಕ್ಷರು ಹಾಗೂ ನೋಡಲ್ ಅಧಿಕರಿಗಳು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ಸಂ–97

ಪ್ರತಿಯನ್ನು:

1. ಮಾನ್ಯ ಆಯುಕ್ತರ ಆಪ್ತ ಸಹಾಯಕರಿಗೆ ಕಳುಹಿಸುತ್ತಾ ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2. ವಿಶೇಷ ಆಯುಕ್ತರು ಆಡಳಿತ ರವರ ಅವಾಗಹನೆಗೆ ಸಲ್ಲಿಸಿದೆ.
3. ವಲಯ ಆಯುಕ್ತರು (ಪಶ್ಚಿಮ) ರವರ ಅವಾಗಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಪಶ್ಚಿಮ) ರವರ ಅವಾಗಹನೆಗೆ ಸಲ್ಲಿಸಿದೆ.
5. ನೋಡಲ್ ಅಧಿಕಾರಿಗಳು ಹಾಗೂ ವಾರ್ಡ ಸಮಿತಿ ಅಧ್ಯಕ್ಷರು ರವರ ಅವಾಗಹನೆಗೆ ಸಲ್ಲಿಸಿದೆ.
6. ಕಛೇರಿ ಕಡತಕ್ಕೆ

Scanned with CamScanner